ದಿನಾಂಕ 25-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಎ.ಎಂ. ವಕೀಲರವರಿಂದಃ**

ನಾನು ವಿದ್ಯಾಭ್ಯಾಸ ಮಾಡಲೇ ಇಲ್ಲ. ಅರ್ಜಿ ತಯಾರು ಮಾಡಲು ವಕೀಲರಿಗೆ ಮಾಹಿತಿ ನಾನೇ ನೀಡಿರುತ್ತೇನೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಯಾರ ತಪ್ಪಿ ನಿಂದ ಅಪಘಾತ ವಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಸ್ಥಳೀಯರಿಂದ ಈ ಅಪಘಾತವು ಗೂಡ್ಸ್ ಗಾಡಿಯ ಚಾಲಕನಿಂದ ಆಗಿದೆ ತಿಳಿದು ಬಂದಿರತ್ತದೆ. ನನ್ನ ಮಗನಿಗೆ ಅಪಘಾತ ಸಮಯದಲ್ಲಿ ಸುಮಾರು 15 ವರ್ಷ. ನನ್ನ ಮಗನೂ ಸಹ ಅಪಘಾತದ ಬಗ್ಗೆ ನನಗೆ ತಿಳಿವಳಿಕೆ ನೀಡಿರುತ್ತಾನೆ. ಅಪಘಾತದ ಆಗುವ ಮೂರು ವರುಷದ ಹಿಂದೆಯೇ ಶಾಲೆಯನ್ನು ಬಿಟ್ಟಿರುತ್ತಾನೆ. ಆ ದಿನ ಬೈಕಿನಲ್ಲಿ ನನ್ನ ಮಗನು ಸೇರಿ 4 ಜನ ಪ್ರಯಾಣಿಸುತ್ತಿದ್ದರು. ಸದ್ರಿ ಬೈಕನ್ನು ಅಭಿಷೇಕ್ ಚಲಾಯಿಸುತ್ತಿದ್ದನು. ಅಭಿಷೇಕ್ ಮತ್ತು ನನ್ನ ಮಗ ಸ್ನೇಹಿತರು. ಅಭಿಷೇಕ್ ಜೊತೆ ನನ್ನ ಮಗ ಕೆಲಸಕ್ಕೆ ಹೋಗುತ್ತಿದ್ದನು. ಅಭಿಷೇಕ್ ಗಾಡಿ ಚಲಾಯಿಸುವಾಗ ಸುಮಾರು 18 ವರುಷ ಆಗಿತ್ತು . ನಾನು ಆತನ ಪ್ರಾಯ ಅಂದಾಜು ಮೇಲೆ ಹೇಳುತ್ತಿದ್ದೇನೆ.

ಪೊಲೀಸಿನವರು ಅಟೋ ಗೂಡ್ಸ್ ಚಾಲಕನ ಮೇಲೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ಆ ವಿಚಾರವನ್ನು ನನ್ನ ಮಗನು ತಿಳಿಸಿರುತ್ತಾನೆ. ಪೊಲೀಸಿನವರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಮ್ಮ ಮನೆ ಅಭಿಷೇಕ್ ರವರ ಮನೆಗಿಂತ ಅರ್ಧ ಕಿ. ಮೀ ದೂರ ಇದೆ. ಅಭಿಷೇಕ್ ತಂದೆಯ ಮೇಲೆ ಮತ್ತು ಅಭಿಷೇಕ್ ಮೇಲೆ ಪ್ರಕರಣ ದಾಖಲು ಮಾಡಿರುವ ವಿಚಾರ ನನಗೆ ತಿಳಿದಿರುತ್ತದೆ. ಈ ಅಪಘಾತವು ಗದಗ ಜಿಲ್ಲೆಯ ಸುವರ್ಣಗಿರಿಯಲ್ಲಿ ಆಗಿರುತ್ತದೆ. ಚಿಕಿತ್ಸೆ ಯನ್ನು ಗದಗ ಮತ್ತು ಲಕ್ಷ್ಮೇಶ್ವರದಲ್ಲಿ

ಪಡೆದಿರುತ್ತೇವೆ. ಅಪಘಾತವಾದ 15 ನಂತರ ಸುವರ್ಣಗಿರಿಯಲ್ಲಿರುವ ವೈದ್ಯರ ಸಲಹೆ ಮೇರೆಗೆ ನನ್ನ ಮಗನ ಚಿಕಿತ್ಸೆಕುಂದಾಪುರದ ಚಿನ್ಮಯಿ ಆಸ್ಪತ್ರೆಯಲ್ಲಿ ಮುಂದುವರಿಸಿರುತ್ತೇನೆ. ಚಿನ್ಮಯಿ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಒಂದು ವಾರ ದಾಖಲಾದ ಬಗ್ಗೆ ದಾಖಲೆ ನೀಡಿರುತ್ತೇನೆ. ಚಿನ್ಮಯಿ ಆಸ್ಪತ್ರೆಯಲ್ಲಿ ನನ್ನ ಮಗನು ಒಳ ರೋಗಿಯಾಗಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಚಿನ್ಮಯಿ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ದಾಖಲಾದ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಈಗ ಮನೆಯಲ್ಲಿ ಇದ್ದಾನೆ. ವೈದ್ಯರು ನನ್ನ ಮಗನಿಗೆ ಯಾವುದೇ ಕೆಲಸ ಮಾಡಬಾರದು ಲಿಖಿತವಾಗಿ ಸಲಹೆ ನೀಡಿರುತ್ತಾರೆ ಸದ್ರಿ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ಮಗನು ಈಗಲೂ ಕೆಲಸ ಮಾಡುತ್ತಿದ್ದಾನೆ ವೈದ್ಯರು ಯಾವುದೇ ಪ್ರಮಾಣ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗುವ ಸಮಯದಲ್ಲಿ ನನ್ನ ಮಗನು ಹೊಲದಲ್ಲಿ ಕೆಲಸ ಮಾಡುತ್ತಿದ್ದನು. ನನಗೆ ಮೂರು ಜನ ಮಕ್ಕಳು. ಈ ಅಪಘಾತದಲ್ಲಿ ಗಾಯಗೊಂಡಿರುವವನ್ನು ನನ್ನ ಮೊದಲ ಮಗನಾಗಿರುತ್ತಾನೆ. ನಮ್ಮ ತೋಟದಲ್ಲಿ ಗೋವಿನ ಜೋಳ ಮತ್ತು ಮೆಣಸಿನ ಕಾಯಿ ಬೆಳೆಯುತ್ತೇವೆ. ನಮಗೆ ಒಂದು ಎಕರೆ ಜಾಗ ಇರುತ್ತದೆ. ಸದ್ರಿ ಹೊಲದಿಂದ ಬರುವ ಉತ್ಪಾದನೆ ನಮ್ಮ ಮನೆ ಖರ್ಚಿಗೆ ಸಾಕಾಗುತ್ತದೆ.

ಅಪಘಾತ ಸಮಯದಲ್ಲಿ ನನ್ನ ಮಗ ತುಂಬಾ ಚಿಕ್ಕವನಾಗಿದ್ದರಿಂದ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮಗ ತುಂಟರ ಜೊತೆ ಓಡಾಡುತ್ತಿದ್ದ ಅವನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಗೂಡ್ಸ್ ವಾಹನ ಚಾಲಕನ ತಪ್ಪಿ ರುವುದಿಲ್ಲ ಎಂದರೆ ಸರಿಯಲ್ಲ. ನೀವು ಅರ್ಜಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಷ್ಟು ಹಣವು ಔಷಧಿಗೆ, ಆಹಾರಕ್ಕೆ, ಒಡಾಟಕ್ಕೆ ಪರಿಚಾರಕರಿಗೆ ಖರ್ಚಾಗಿಲ್ಲವೆಂದರೆ ಸರಿಯಲ್ಲ. ನನ್ನ

ಮಗನ ಎಲ್ಲಾ ಚಿಕಿತ್ಸೆ ಸರ್ಕಾರಿ ಆಸ್ಪತ್ರೆ ಯಲ್ಲಿ ಆದ ಕಾರಣ ನನಗೆ ಯಾವುದೇ ಖರ್ಚು ವೆಚ್ಚಗಳು ಆಗಿಲ್ಲ ಎಂದರೆ ಸರಿಯಲ್ಲ. ಈ ಅಪಘಾತದ ಬಗ್ಗೆ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಧನೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.

ಅಭಿಷೇಕನು ಚಾಲನೆ ಮಾಡುತ್ತಿದ್ದ ವಾಹನದ ಮಾಲಿಕರನ್ನು ಮತ್ತು ಅದರ ವಿಮೆ ಕಂಪನಿಯನ್ನು ಈ ಅರ್ಜಿಯಲ್ಲಿ ಎದುರುದಾರರಾಗಿ ಸೇರಿಸಲು ನನಗೇನೂ ತೊಂದರೆ ಇರಲಿಲ್ಲ. ಆದ್ದರಿಂದ ಅಭಿಷೇಕನು ಚಾಲನೆ ಮಾಡುತ್ತಿದ್ದ ವಾಹನದ ಮಾಲಿಕರ ಮತ್ತು ಅದರ ವಿಮಾ ಸಂಸ್ಥೆಯವರು ನಮಗೆ ಹಣ ಕೊಡಲು ಬಾಧ್ಯಸ್ಥರು ಎಂದರೆ ಸಾಕ್ಷಿದಾರರು ಅಭಿಷೇಕ್ ಚಾಲನೆ ಮಾಡುತ್ತಿದ್ದ ವಾಹನದ ತಪ್ಪಿ ಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

1 ನೇ ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.
ಉಡುಪಿ.